ಹೇಗೆ? ಇದು ಎಂಥ ವ್ಯವಸ್ಥೆ? even after 30 days if we cannot get that data from all the districts, ಯಾವ ವ್ಯವಸ್ಥೆಯಲ್ಲಿದ್ದೇವೆ ನಾವು ?

ಶ್ರೀ ಎ. ಟಿ. ರಾಮಸ್ವಾಮಿ : ನನ್ನ ಪ್ರಶ್ನೆಗೆ ಸರಿಯಾಗಿ ಉತ್ತರ ಬರಲಿಲ್ಲ ಆದ್ದರಿಂದ ನಾನು ಧರಣಿ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಎ.ಟಿ. ರಾಮಸ್ವಾಮಿಯವರು ಸದನದ ಬಾವಿಗೆ ಬಂದು ನಿಂತರು)

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಪ್ರಚಾರ ಇಲಾಖೆಯ ಸಚಿವರು) : ಉಪಾಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 15ನೇ ಪಟ್ಟಿಯಲ್ಲಿರುವ 31 ಪ್ರಶ್ನೆಗಳ ಪೈಕಿ 23 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ರಾಜ್ಯದಲ್ಲಿ ಪ್ಯಾರಾ ಮೆಡಿಕಲ್ ವರ್ಕರ್‌ಹುದ್ದೆಗಳ ಭರ್ತಿ

1006 (1488)

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

(ಅ) ರಾಜ್ಯದಲ್ಲಿ ಖಾಲಿ ಇರುವ ಪ್ಯಾರಾ ಮೆಡಿಕಲ್ ವರ್ಕರ್ ಹುದ್ದೆಗಳ ಒಟ್ಟು ಸಂಖ್ಯೆ ಎಷ್ಟು?

(ಆ) ಈ ಹುದ್ದೆಗಳನ್ನು ತುಂಬಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.):

ಅ) ಕೆ. ಹೆಚ್. ಎಸ್. ಡಿ. ಪಿ. ಯೂ. ಸೇರಿದಂತೆ ಖಾಲಿ ಇರುವ ಒಟ್ಟುಹದ್ದೆಗಳ ಸಂಖ್ಯೆ. 1950. :

ಆ) **ಈ ಹುದ್ದೆಗಳ ಪೈಕಿ :**

(1) ಜಾಹಿರಾತು ಮಾಡಿ ಅರ್ಜಿ ಸ್ವೀಕರಿಸಲಾದ ಹುದ್ದೆಗಳ ಸಂಖ್ಯೆ	-	1549
(2) ಜಾಹಿರಾತು ಮಾಡಬೇಕಾದ ರಿಫ್ರಾಕ್ಷನಿಸ್ಟ್ ಹುದ್ದೆಗಳ ಸಂಖ್ಯೆ	-	28
(3) ಹೊಸದಾಗಿ ಜಾಹಿರಾತು ಮಾಡಿ ಇನ್ನೂ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿರುವ ಹುದ್ದೆಗಳ ಸಂಖ್ಯೆ	-	373
ಒಟ್ಟು ಹುದ್ದೆಗಳು	-	1950

ಪರಿಸರ ಮಾಲಿನ್ಯ ಮಂಡಳಿಯಲ್ಲಿರುವ ಖಾಲಿ ಹುದ್ದೆಗಳ ಭರ್ತಿ

1007 (1490)

ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.